

ಆಹಾ ಸುದ್ದಿ!

★ ಸಸಿತೋಟ



ಚೀನಾದ ಹುನಾನ್ ಪ್ರಾಂತ್ಯದ ರೈತ ಲಿಯಾಂಗ್‌ಕಾಯ್ ಸಂಶೋಧಿಸಿರುವ ಸ್ಯೂಟ್‌ಕೇಸ್ ಕಂ ಮೋಟಾರ್. ಗಂಟೆಗೆ 12.5 ಮೀಟರ್ ವೇಗದಲ್ಲಿ ಓಡುತ್ತದಂತೆ. 10 ವರ್ಷಗಳ ಕಾಲ ಸಂಶೋಧನೆ ನಡೆಸಿ ಕಂಡು ಹಿಡಿದ ತಂತ್ರಜ್ಞಾನವಂತೆ. ಓಡು, ಅಮೆರಿಕಾವನ್ನು ಹಿಂದಕ್ಕೆ ಹಾಕು ಎಂದು ಹುರಿದುಂಬಿಸುತ್ತಿರುವ ಚೀನಾದಲ್ಲಿ ಗಂಟೆಗೆ 12.5 ಮೀಟರ್ ವೇಗವೆಂದರೆ ಆಮೆ ವೇಗ ಅಷ್ಟೆ.

ಗೂಗ್ಲ್ ನಿರ್ಮಿಸಿರುವ ಕಾರಿದು. ಸ್ಟೀರಿಂಗ್ ಇಲ್ಲ. 'ಚಲಿಸು' ಹಾಗೂ 'ನಿಲ್ಲು' ಎಂದು ಬಟನ್ ಒತ್ತಿದರಾಯ್ತು. ಸೆನ್ಸರ್ ಮೂಲಕ ಗಮ್ಯವನ್ನು ಹುಡುಕಿಕೊಂಡು ಹೋಗುತ್ತದಂತೆ. ಕಂಪೆನಿಯ ಉದ್ಯೋಗಿಗಳಿಗೆ 'ಕೆಲಸ ಮಾಡು' ಹಾಗೂ 'ನಿಲ್ಲಿಸು' ಎಂಬ ಶಬ್ದಗಳೇ ಕಾರಿಗೂ ಅನ್ವಯವಾಗುತ್ತವೆ ಎಂಬ ಕುಹಕ ಕಚೇರಿಯ ತುಂಬಾ ಕೇಳಿ ಬರುತ್ತಿದೆಯಂತೆ.



ವಾಷಿಂಗ್ಟನ್‌ನಲ್ಲಿ ನಡೆಯುವ ನಗ್ನ ಬೈಕ್ ಸವಾರಿಯ ಆಯೋಜಕರು ಇದೀಗ ಸವಾರರು ಉಡುಪು ತೊಟ್ಟುಕೊಂಡು ಬಂದರೂ ಪರವಾಗಿಲ್ಲ ಎಂದು ಘೋಷಿಸಿದ್ದಾರಂತೆ. ಸಸ್ಯಮೂಲದ ಇಂಧನ ಮತ್ತು ದೇಹ ದಾರ್ಢ್ಯದ ಬಗ್ಗೆ ಗಮನ ಸೆಳೆಯುವ ಈ ಸವಾರಿಯಲ್ಲಿ ಕೆಲವು ಸವಾರರ ದೇಹ ಪ್ರದರ್ಶನಕ್ಕೆ ಯೋಗ್ಯವಲ್ಲ ಎಂದು ಆಯೋಜಕರು ಈ ತೀರ್ಮಾನ ಕೈಗೊಂಡಿರಬಹುದು.



ಲಂಡನ್ನಿನಲ್ಲಿ ಬಣ್ಣದ ಓಟ ಜನಪ್ರಿಯ. ಸ್ಪರ್ಧಿಗೆ ಬಣ್ಣ ಎರಚಿ ಹುರಿದುಂಬಿಸುವುದಕ್ಕಿಂತ ದಾರಿ ತಪ್ಪಿಸುವುದು ಈ ಸಂಪ್ರದಾಯದ ಹಿಂದಿನ ಹುನ್ನಾರವಂತೆ. ಆಟದಲ್ಲಿ ಹೂಟ ನುಸುಳಿದ್ದು ಇಂತಹ ಸಂಪ್ರದಾಯದಿಂದಲೇ ಇರಬಹುದು.

ಜಪಾನಿನ ಈ ಮಾನವನನ್ನು ಹೋಲುವ ರೋಬಾಟ್ ಹೆಸರು ಪೆಪ್ಪರ್. ಅಲ್ಲಿ ವೃದ್ಧರ ಸಂಖ್ಯೆ ಜಾಸ್ತಿಯಾಗುತ್ತಿದ್ದು ಅವರಿಗೆ ನೆರವಾಗಲು ಇದನ್ನು ನಿರ್ಮಿಸಿದ್ದಾರಂತೆ. ನರ್ಸ್, ಬೇಬಿ ಸಿಟ್ಟರ್, ತುರ್ತು ವೈದ್ಯಕೀಯ ಸಿಬ್ಬಂದಿಯಂತೆ ಇದು ನೆರವು ನೀಡುತ್ತದಂತೆ. ಸಮಯ ಬಂದರೆ ಕಣ್ಣಿಗೆ ಪೆಪ್ಪರ್ ಪುಡಿ ಎರಚಿ ವೃದ್ಧರನ್ನು ವಂಚಿಸುವ ಕಲೆ ಕಲಿಯದಿದ್ದರೆ ಸಾಕು.




ಇತ್ತೀಚೆಗೆ ದೆಹಲಿಯಿಂದ ಫ್ರಾಂಕ್‌ಫರ್ಟ್‌ಗೆ ಹೊರಟ ಏರ್ ಇಂಡಿಯಾ ವಿಮಾನವನ್ನು ಮೂರು ತಾಸುಗಳಲ್ಲೇ ವಾಪಸ್ ದೆಹಲಿಯ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತರಲಾಯಿತು. ಕಾರಣ ವಿಮಾನದ ಎಲ್ಲಾ ನಾಲ್ಕು ಶೌಚಾಲಯಗಳು ತುಂಬಿ ತುಳುಕುತ್ತಿದ್ದವಂತೆ. ಪ್ರಯಾಣಿಕರಿಗೇನೂ ಭೇದಿ ಸಮಸ್ಯೆ ಉಂಟಾಗಿರಲಿಲ್ಲ. ಆದರೆ ವಿಮಾನದಲ್ಲಿ ಕೊಡುವ ಉಚಿತ ಹೊದಿಕೆ, ಟವಲ್, ದಿಂಬು, ಚಪ್ಪಲಿ ಎಲ್ಲವೂ ಶೌಚಾಲಯದಲ್ಲಿ ತುಂಬಿಕೊಂಡಿದ್ದವಂತೆ. ಉಚಿತ ವಸ್ತುಗಳ ಗುಣಮಟ್ಟ ನೋಡಿ ಅವುಗಳನ್ನು ಎಲ್ಲಿಡಬೇಕೋ ಅಲ್ಲೇ ಇಟ್ಟಿರಬಹುದು.